# ನಾಗಿ

■ ಮಾಧವಿ ಭಂಡಾರಿ ಕೆರೆಕೋಣ
ಕಲೆ: ಬಾದಲ್ ನಂಜುಂಡಸ್ವಾಮಿ



ವೈಶಾಖದ ಒಂದು ಬೆಳಗು. ಸೂರ್ಯ ಕಣ್ಣೊಡೆಯುವಾಗಲೇ ದಿಟ್ಟಿಸಿ ನೋಡುತ್ತಿರುವಂತಹ ಬಿಸಿಲು. ತಲೆಕೂದಲಲ್ಲಿ ಒಸರುವ, ಎದೆಕಣಿವೆಯಲ್ಲಿ ಇಳಿಯುವ, ತೊಡೆ ಬಯಲಲ್ಲಿ ಹರಿಯುವ ಬೆವರ ಹೊಳೆ. ಒರೆಸಿದಷ್ಟೂ ಒರತೆ. ತೊಟ್ಟ ಬಟ್ಟೆಯನ್ನೆಲ್ಲ ಕಿತ್ತೆಸೆಯಬೇಕೆನ್ನುವ ರೇಜಿಗೆ. ಸೆರಗಲ್ಲಿ ಬೆವರೊರಸಿಕೊಳ್ಳುತ್ತ ಒಂದೇ ಸಮನೆ ಒದರುವ ಕಾಗೆಗಳನ್ನು ಓಡಿಸಲು ಹಿಂದುಗಡೆಯ ಅಂಗಳಕ್ಕೆ ಬಂದು, ಈ ಪೋಪ್ಪಳೆ ಮರವೊಂದನ್ನು ಕಡಿಸಿಯೇ ಬಿಡಬೇಕು ಅಂದುಕೊಳ್ಳುತ್ತ, ಕೈಗೆ ಸಿಕ್ಕ ಕಲ್ಲೆತ್ತಿ ಮೇಲೆಸೆಯ ಬೇಕೆನ್ನುವಾಗಲೆ ಸುಳಿವು ಸಿಕ್ಕ ಕಾಗೆಗಳು ಪರಾರಿಯಾದವು. ಮೇಲೆ ನೋಡಿದರೆ ಒತ್ತಾಗಿ ಬೆಳೆದ ಮೊಳಗಾತ್ರದ ಕಾಯಿಗಳನ್ನು ನೋಡಿದಾಗ 'ಯಾರ ಕೈತಾನೆ ಈ ಮರಕ್ಕೆ ಕೊಡಲಿ ಹಾಕೀತು' ಎಂದುಕೊಳ್ಳುತ್ತ ಕಲ್ಲುಗಳನ್ನು ಅಲ್ಲೇ ನೆಲಕ್ಕೆ ಎಸೆದು ನಿಂತಳು. ಹೊರಕ್ಕೆ ಬಂದಾಗಲೇ ದೇವರಿಗೆ ನಾಲ್ಕು ದಾಸವಾಳದ ಹೂವನ್ನಾದರೂ ಕೊಯ್ದಿಟ್ಟು ಬಿಡೋಣವೆಂದು ಪಕ್ಕಕ್ಕೆ ಹೊರಳಿದಾಗ ಪಾಗಾರದ ಮೂಲೆಯಲ್ಲಿ ಹಲಸಿನ ಮರದ ಸಂಧಿಯಲ್ಲಿರುವ ಸಂಕ ದಾಟುತ್ತ ತುಸು ಭಾರವಾದ ಹೆಜ್ಜೆಗಳನ್ನಿಡುತ್ತಿರುವ ನಾಗಿ ಕಣ್ಣಿಗೆ ಬಿದ್ದಿದ್ದೇ ಬಂದ ಕಾರ್ಯ ಮರೆತೇ ಹೋಯ್ತು.

ಮುಖದಲ್ಲಿ ಕುತೂಹಲ ತುಂಬಿಕೊಂಡು ಹಿಂಬಾಗಿಲ ಒಳ ಪ್ರವೇಶಿಸುತ್ತಿರುವಾಗ ನಿನ್ನೆ ತಾನೆ ತಲೆ ಬೋಳಿಸಿಕೊಂಡು ನಿಲ್ಲದೇ ಇರುವ ಕೆಂಪು ಸೀರೆ ಸೆರಗನ್ನು ಎಳೆದು ನಿಲ್ಲಿಸಿಕೊಳ್ಳುತ್ತಿರುವ ಅತ್ತೆ ಎದುರಾದರು.

'ಆ ನಾಗಿ ನೋಡಿದ್ರಾ? ಒಳ್ಳೆ ಮೈಕೈ ತುಂಬ್ಕಂಡು ರಕ್ತವಡೆತು. ನೋಡ್ದ್ರೆ ಗನಾ ಹೊಟ್ಟೆನು ಕಾಣ್ತು. ಅದನ್ನೆಲ್ಲ ಎಷ್ಟ್ ದಿನ ಮುಚ್ಚಿಟ್ಕಂಬ್ಲಕ್ಕಾಗ್ತು? ತನ್ನಷ್ಟಕ್ಕೆ ತಾನಿರೊ ಗನಾ ಮಗು ಅದ್ಕಂಡಿದ್ದೆ. ನೋಡ್ದ್ರೆ ಈ ನಮ್ನೆ. ಈಗಿನ ಕಾಲದಲ್ಲಿ ಯಾರನ್ನ ನಂಬವ ಯಾರನ್ನ ಬಿಡವ... ಶಿವ ಶಿವಾ ನೋಡಲೆ ನಂಗಕ್ಕೆ ನಾಚ್ಕೆ ಆಗ್ತು ಅಲ್ದಾ' ಎಂದು ಮುಖ ಸಿಂಡಿರಿಸಿದಳು ಮೇಗಣ ಮನೆ ಗಂಗೊಡ್ತಿ.

'ಅಯ್ಯೋ ಆನು ಹಂಗೆ ಅಂದ್ಕಂಡೆ. ಒಡೇರ ಮನೆ ಊಟ ತಿಂಡಿ ಪ್ರಭಾವಳಿ ಹೇಳಿ. ನೋಡ್ದ್ರೆ ಏನೋ ಎಡವಟ್ಟಾದಂಗ ಕಾಣ್ತು. ಈ ಕೆಮ್ಮು, ಹಾದ್ರ ಎಲ್ಲ

